| | | |
|---|---|---|
| ಓ ಎಸ್ | 210/2022 | ಪಿ.ಡಬ್ಲ್ಯೂ: 1 |

<u>ಇಂದು ದಿಃ 30.08.2023 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲುಃ</u> 5 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ-

ಪ್ರತಿವಾದಿಗಳಾದ 1 ಮತ್ತು 2 ರವರು ದಾವಾ ಅನುಸೂಚಿಯ 6 ನೇ ಸ್ವತ್ತನ್ನು ಭೋಗ್ಯ ತೀರುವಳಿಗೋಸ್ಕರ ಮತ್ತು ತಮ್ಮ ಕುಟುಂಬದ ದರ್ದಿಗೋಸ್ಕರ ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕಾರಣ 5 ನೇ ಪ್ರತಿವಾದಿ ಬಸಪ್ಪ ಸದ್ಭಾವನಾ ಖರೀದಿದಾರರಾಗಿರುತ್ತಾರೆ ಎಂದೆರ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿಂಿಂದ ದಾವಾ ಅನುಸೂಚಿಯ 6 ನೇ ಸ್ವತ್ತನ್ನು 6 ನೇ ಪ್ರತಿವಾದಿ ಖರೀದಿಸಿದ ಕಾರಣ ಅವರು ಕೂಡಾ ಸದ್ಭಾವನಾ ಖರೀದಿದಾರರು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿಯ 6 ನೇ ಸ್ವತ್ತು ಮಾರಾಟವಾಗಿ 18 ವರ್ಷಗಳು ಕಳೆದ ಕಾರಣ ಹಾಗೂ ನಾವು ಯಾರೂ ಒಟ್ಟು ಕುಟುಂಬದಲ್ಲಿ ಸ್ವಾಧೀನಾನುಭವದಲ್ಲಿ ಇರದ ಕಾರಣ ಹಾಗೂ ಈಗ 6 ನೇ ಪ್ರತಿವಾದಿ ದಾವಾ ಅನುಸೂಚಿಯ 6 ನೇ ಸ್ವತ್ತಿನ ಸ್ವಾಧೀನದಲ್ಲಿ ಇರುವುದರಿಂದ ದಾವೆ ಕಾಲಪರಿಮಿತಿಯೊಳಗೆ ಇಲ್ಲ ಎಂದರೆ ಇವರು ಮಾರಾಟ ಮಾಡಿದ್ದು ನಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2005 ರಲ್ಲಿ ದಾವಾ ಸ್ವತ್ತು ಮಾರಾಟ ಮಾಡಿದ ವಿಚಾರ ಗೊತ್ತಿದ್ದರೂ ಈಗ ಆಸ್ತಿ ಬೆಲೆ ಹೆಚ್ಚಾದ್ದ ಕಾರಣ ಬೇರೆಯವರ ಮಾತು ಕೇಳಿ ದುರುದ್ದೇಶದಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈಗ ಒಟ್ಟು ಕುಟುಂಬ ಇಲ್ಲ ಅದು 60 ವರ್ಷಗಳ ಹಿಂದೆ ನಶಿಸಿಹೋಗಿದೆ ಎಂದರೆ ಸರಿಯಲ್ಲ.

ನೀಲಮ್ಮ ಮತ್ತು ಉಮೇಶ ರವರಿಗೆ ದಾವಾ ಸ್ವತ್ತುಗಳಲ್ಲದೇ ಇನ್ನೂ ಬೇರೆ ಸ್ವತ್ತುಗಳು ಇವೆ ಎಂದರೆ ಸರಿ, ಸಾಕ್ಷಿಯು ಪುನಃ ಬೇರೆ ಸ್ವತ್ತುಗಳು ಇರಬಹುದು ನನಗೆ ತಿಳಿದಷ್ಟು ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಿದ್ದೇನೆ ಎಂದು ನುಡಿಯುತ್ತಾರೆ. ಒಂದು ಮತ್ತು 2 ನೇ ಪ್ರತಿವಾದಿಗಳ ಮನೆ ಪಿತ್ರಾರ್ಜಿತ ಆಸ್ತಿಯಾಗಿದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸೇರಿಸಲು ತೊಂದರೆ ಇರಲಿಲ್ಲ ಆದರೆ ಸೇರಿಸಿಲ್ಲ.

| | | |
|---|---|---|
| ಓ ಎಸ್ | 210/2022 | ಪಿ.ಡಬ್ಲ್ಯೂ: 1 |

3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರ ಮನವಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಿದೆ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.